ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

*ಸಂಖ್ಯೆ: ಪಪೂಶಿಇ/ಶೈ.ಶಾ-4/ತ.ಕಾ.ಹ/ಅ.ವಿ/1/2018-19* ದಿನಾಂಕ: 17-07-2018

## ಜ್ಞಾಪನ

ವಿಷಯ: 2018-19ನೇ ಶೈಕ್ಷಣಿಕ ಸಾಲಿಗೆ ಜುಲೈ ತಿಂಗಳಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅರ್ಥಶಾಸ್ತ್ರ ವಿಷಯವನ್ನು ಬೋಧಿಸುತ್ತಿರುವ ಉಪನ್ಯಾಸಕರುಗಳಿಗೆ ಜಿಲ್ಲಾ/ಕ್ಲಸ್ಟರ್‌ಮಟ್ಟದ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ನಡೆಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅದೇಶ ಪತ್ರ ಸಂಖ್ಯೆ: ಇಡಿ 139 ಯೋಸಕ 2018, ಬೆಂಗಳೂರು, ದಿನಾಂಕ: 29-05-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯು 2018-19ನೇ ಸಾಲಿನಿಂದ ದ್ವಿತೀಯ ಪಿಯುಸಿ ತರಗತಿಗಳಿಗೆ ಅರ್ಥಶಾಸ್ತ್ರ ವಿಷಯದ ರಾಷ್ಟ್ರೀಯ ಪಠ್ಯಕ್ರಮವನ್ನು (ಎನ್‌ಸಿಇಆರ್‌ಟಿ) ಯಥಾವತ್ತಾಗಿ ಜಾರಿಗೊಳಿಸಿದೆ. ಸದರಿ ವಿಷಯವನ್ನು ಬೋಧಿಸುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ 07ದಿನಗಳ ವಸತಿರಹಿತ . ತರಬೇತಿ ಕಾರ್ಯಕ್ರಮವನ್ನು ದಿನಾಂಕ: 30-07-2018 ರಿಂದ 05-08-2018 ರವರೆಗೆ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಪದವಿ ಪೂರ್ವ ಶಿಕ್ಷಣದಲ್ಲಿ 2018-19ನೇ ಶೈಕ್ಷಣಿಕ ಸಾಲಿನಿಂದ ದ್ವಿತೀಯ ಪಿಯುಸಿ ತರಗತಿಗಳಿಗೆ ಅರ್ಥಶಾಸ್ತ್ರ ವಿಷಯದ ರಾಷ್ಟ್ರೀಯ ಪಠ್ಯಕ್ರಮವನ್ನು ಬೋಧನೆ ಮಾಡಬೇಕಾಗಿರುತ್ತದೆ. ಉಪನ್ಯಾಸಕರುಗಳು ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳನ್ನು ವಿದ್ಯಾರ್ಥಿಗಳಿಗೆ ಪ್ರಾರಂಭಿಸುವ ಮೊದಲು ಹೊಸಪಠ್ಯಕ್ರಮದ ಬಗ್ಗೆ ಕೆಲವು ಕ್ಲಿಷ್ಟ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವ ಅಗತ್ಯವಿರುತ್ತದೆ. ಆದ್ದರಿಂದ ಅವಶ್ಯಕವಾಗಿ ತಿಳಿಸಬೇಕಾದ ವಿಷಯಗಳನ್ನು ತರಬೇತಿ ಕಾರ್ಯಕ್ರಮದಲ್ಲಿ ಉಪನ್ಯಾಸಕರ ಗಮನಕ್ಕೆ ತರವುದು ಅಗತ್ಯವಾಗಿರುತ್ತದೆ. ಸದರಿ ತರಬೇತಿ ಕಾರ್ಯಕ್ರಮವನ್ನು ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ನೀಡಿದಲ್ಲಿ ಬೋಧನಾ ಕಾರ್ಯ ಸುಗಮವಾಗಿ ನಡೆಯುವುದರ ಜೊತೆಗೆ ಎಲ್ಲಾ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಏಕರೂಪದಲ್ಲಿ ನಡೆಯಲು ಸಹಾಯಕವಾಗುತ್ತದೆ.

ಈ ನಿಟ್ಟಿನಲ್ಲಿ ಪ್ರಥಮ ಹಂತದಲ್ಲಿ ಈ ಕೆಳಕಂಡ ವಿಷಯದಲ್ಲಿ ವಿಭಾಗಮಟ್ಟದಲ್ಲಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ಅರ್ಥಶಾಸ್ತ್ರ
- ತರಬೇತಿ ದಿನಾಂಕ ಹಾಗೂ ಸ್ಥಳಗಳನ್ನೊಳಗೊಂಡ ವಿಷಯವಾರು ವೇಳಾಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ನೀಡಲಾಗಿದೆ.

- ಪ್ರತಿ ತರಬೇತಿ ಕೇಂದ್ರಕ್ಕೆ ಸಂಬಂಧಪಟ್ಟ ವಿಷಯಗಳ ಉಪನ್ಯಾಸಕರುಗಳನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ನಿಯೋಜನೆ ಮಾಡುವುದು ಹಾಗೂ ಉಳಿದ ಎಲ್ಲಾ ಸಂಪೂರ್ಣ ಜವಾಬ್ದಾರಿ ಮತ್ತು ಉಸ್ತುವಾರಿಯನ್ನು ನಿರ್ವಹಿಸುವುದು.
- ಪ್ರತಿ ವಿಷಯದಲ್ಲಿ ಒಂದು ಕೇಂದ್ರಕ್ಕೆ ಶೈಕ್ಷಣಿಕವಾಗಿ ವಿಷಯಜ್ಞಾನ ಹೊಂದಿರುವ ಮತ್ತು ಜವಾಬ್ದಾರಿ ನಿರ್ವಹಿಸಬಲ್ಲ ಒಬ್ಬರು ಹಿರಿಯ ಉಪನ್ಯಾಸಕರು/ಪ್ರಾಚಾರ್ಯರನ್ನು ತರಬೇತಿಯ ಸಂಯೋಜಕರನ್ನಾಗಿ ಇಲಾಖೆಯಿಂದ ನಿಯೋಜಿಸಲಾಗುವುದು ಮತ್ತು ಒಬ್ಬ ಹಿರಿಯ ಉಪನ್ಯಾಸಕರನ್ನು ತರಬೇತಿಯ ಸಹ ಸಂಯೋಜಕರನ್ನಾಗಿ ಉಪನಿರ್ದೇಶಕರು ನಿಯೋಜಿಸಿ, ಅವರನ್ನೊಳಗೊಂಡಂತೆ ಜಿಲ್ಲಾ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿಯೇ ಒಂದು ಸಮಿತಿ ರಚಿಸುವುದು.
- ಜಿಲ್ಲಾ ಮಟ್ಟದಲ್ಲಿ ರಚಿಸಿರುವ ಸಮಿತಿಯ ಬಗ್ಗೆ ಸ್ಪಷ್ಟವಾದ ವರದಿಯನ್ನು ತರಬೇತಿಗೆ ಮುನ್ನವೆ ಇಲಾಖೆಗೆ ಸಲ್ಲಿಸಲು ಸೂಚಿಸಿದೆ.

**ಸಮಿತಿ ಮತ್ತು ಸಂಯೋಜಕರ ಜವಾಬ್ದಾರಿಗಳು:**

- ತರಬೇತಿ ಕಾರ್ಯಕ್ರಮದ ರೂಪರೇಷೆಗಳನ್ನು ಸಿದ್ಧಪಡಿಸುವುದು, ವಿಷಯವಾರು ಗುಂಪಿನಲ್ಲಿ ಚರ್ಚಿಸಿ, ತರಬೇತಿಗಾಗಿ ಕ್ಲಿಷ್ಟಕರವಾದ ವಿಷಯ/ಅಧ್ಯಾಯಗಳನ್ನು ಗುರುತಿಸುವ ಹಾಗೂ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುವ ಸಂಪೂರ್ಣ ಜವಾಬ್ದಾರಿ ಈ ಸಮಿತಿಯದ್ದಾಗಿರುತ್ತದೆ.
- ಕಾರ್ಯಕ್ರಮ ಏರ್ಪಾಡು ಮಾಡಿರುವ ಕಾಲೇಜಿನಲ್ಲಿ ತರಬೇತಿ ನಡೆಸಲು ಬೇಕಾಗಿರುವ ಅನುಕೂಲಗಳು ಅಂದರೆ OHP/LCD Projector/ppt ಇತ್ಯಾದಿಗಳ ಏರ್ಪಾಡನ್ನು ಸಂಬಂಧಪಟ್ಟ ಪ್ರಾಂಶುಪಾಲರ/ಕಾಲೇಜಿನ ಮುಖ್ಯಸ್ಥರ ನೆರವಿನಿಂದ ಮಾಡುವುದು.
- ತರಬೇತಿ ಕಾರ್ಯಕ್ರಮದ ಪ್ರಾರಂಭಿಕ ದಿನದಂದು ಬೆಳಗ್ಗೆ 09 ರಿಂದ ನೋಂದಣಿಯನ್ನು ಬಯೋಮೆಟ್ರಿಕ್ ಮೂಲಕ ಮಾಡಿಕೊಳ್ಳುವುದು ಹಾಗೂ ತರಬೇತಿಗೆ ಹಾಜರಾಗುವ ಉಪನ್ಯಾಸಕರುಗಳಿಗೆ ಪೆನ್/ಫೈಲ್/ಪ್ಯಾಡ್ ಮತ್ತು ಕಾರ್ಯಕ್ರಮದ ವೇಳಾಪಟ್ಟಿಯನ್ನು ವಿತರಿಸುವುದು.
- **ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಹಾಜರಾತಿಗಾಗಿ ಇಲಾಖೆಯಿಂದ ನೀಡಿದ ಬಯೋ ಮೆಟ್ರಿಕ್ ಯಂತ್ರವನ್ನು ತಮ್ಮ ಕೇಂದ್ರದಲ್ಲಿ ಇರುವ ಅಥವಾ ಸಮೀಪ ವಿರುವ ಕಾಲೇಜಿನಿಂದ ಸದರಿ ಕೇಂದ್ರಕ್ಕೆ ಉಪನಿರ್ದೇಶಕರು ರವರು ಪಡೆದು ನೀಡುವ ವ್ಯವಸ್ಥೆಮಾಡಿ, ಈ ಮೂಲಕ ತರಬೇತಿಗೆ ಹಾಜರಾಗುವ ಉಪನ್ಯಾಸಕರ ಹಾಜರಾತಿಯನ್ನು ಪಡೆಯಲು ತಿಳಿಸಿದೆ.**
- **ಸದರಿ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗುವ ಉಪನ್ಯಾಸಕರುಗಳಿಗೆ ಅಧಾರ ಕಾರ್ಡ್ ಪ್ರತಿ ಹಾಗೂ ಬ್ಯಾಂಕ್ ಪಾಸ್ ಬುಕ್ ಪ್ರತಿಯನ್ನು ತರಬೇತಿ ಕೇಂದ್ರಕ್ಕೆ ತರವುದನ್ನು ಕಡ್ಡಾಯವಾಗಿ ಸೂಚಿಸಲಾಗಿದೆ.**
- **ಸದರಿ ತರಬೇತಿ ಕಾರ್ಯಕ್ರಮದ ಹಾಜರಾತಿ ತಂತ್ರಾಂಶ (Software) ವನ್ನು ಇಲಾಖೆಯಿಂದ ಒದಗಿಸಲಾಗುವುದು.**
- **ತರಬೇತಿ ಕಾರ್ಯಕ್ರಮದಲ್ಲಿ ಗೈರುಹಾಜರಾಗುವ ಉಪನ್ಯಾಸಕರುಗಳಿಗೆ ಕಾರಣ ಕೇಳಿ ನೋಟಿಸ್‌ಅನ್ನು ತಕ್ಷಣವೇ ಜಾರಿಗೊಳಿಸುವ (Auto Generate) ತಂತ್ರಾಂಶವನ್ನು ಇಲಾಖೆಯಿಂದ ಒದಗಿಸಲಾಗುವುದು.**
- ಪ್ರತಿ ವಿಷಯದ ಪ್ರತಿ ಕೇಂದ್ರದಲ್ಲಿ 50 ಉಪನ್ಯಾಸಕರಂತೆ ತರಗತಿಗಳನ್ನು ವಿಂಗಡಿಸಿಕೊಳ್ಳುವುದು.
- ಪ್ರತಿ ದಿನ ಕಾರ್ಯಕ್ರಮವನ್ನು ಬೆಳಗ್ಗೆ 9 ಗಂಟೆಗೆ ಪ್ರಾರಂಭಿಸಿ ಸಂಜೆ 5.30ರವರೆಗೆ ನಡೆಯುವಂತೆ ನೋಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಯಾವುದೇ ಅಧಿವೇಶನ (Session) ಖಾಲಿ ಇರದಂತೆ ನೋಡಿಕೊಳ್ಳುವುದು ಒಂದು ವೇಳೆ ಸಂಪನ್ಮೂಲ ವ್ಯಕ್ತಿಗಳು ಬಾರದಿದ್ದಲ್ಲಿ ಕೂಡಲೇ ಬದಲಿ ಸಂಪನ್ಮೂಲ ವ್ಯಕ್ತಿಗಳನ್ನು ಏರ್ಪಾಡು ಮಾಡುವುದು.
- ಉಪನ್ಯಾಸ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳ ಅಗತ್ಯತೆಗಳನ್ನು ಕಾಲೇಜಿನ ಪ್ರಾಂಶುಪಾಲರ/ಕಾಲೇಜಿನ ಮುಖ್ಯಸ್ಥರ ಹಾಗೂ ಸಂಯೋಜಕರ ಸಹಕಾರದೊಂದಿಗೆ ಪೂರೈಸುವುದು.
- **ತರಬೇತಿ ಕಾರ್ಯಕ್ರಮದಲ್ಲಿ ಸಂಬಂಧಿಸಿದ ಎಲ್ಲಾ ಉಪನ್ಯಾಸಕರು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.**

- ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲಾ ಉಪನ್ಯಾಸಕರು ಸಮಯ ಪಾಲನೆ ಮತ್ತು ಶಿಸ್ತನ್ನು ಕಾಪಾಡಿಕೊಳ್ಳುವಂತೆ ನೋಡಿಕೊಳ್ಳುವುದು.
- ವಸತಿ ರಹಿತವಾಗಿರುವುದರಿಂದ ಕಾಫಿ/ಟೀ ವಿರಾಮದಲ್ಲಿ (11.30 ರಿಂದ 11.45 ಮತ್ತು 3.30 ರಿಂದ 3.45) ಕಾಫಿ/ಟೀ/ಬಿಸ್ಕೆಟ್ಸ್ ಏರ್ಪಾಡು ಮಾಡುವುದು ಹಾಗೂ ಮಧ್ಯಾಹ್ನ ಊಟದ ವಿರಾಮದಲ್ಲಿ (1.15 ರಿಂದ 2.00) ಲಘು ಉಪಹಾರ (Working Lunch) ಏರ್ಪಾಡು ಮಾಡುವುದು.
- ಮೊದಲ ದಿನ ತರಬೇತಿಗೆ ನೊಂದಣಿ ಮಾಡಿಕೊಂಡ ಉಪನ್ಯಾಸಕರ ಪಟ್ಟಿಯ ಪ್ರಕಾರ ದಿನಚರಿಯನ್ನು ಸಿದ್ಧಪಡಿಸಿ ಪ್ರತಿದಿನ ಬೆಳಗ್ಗೆ 9.00 ಗಂಟೆಗೆ ಮತ್ತು ಸಂಜೆ 5.30ಗೆ ಕಡ್ಡಾಯವಾಗಿ ಎರಡು ಸಾರಿ ಹಾಜರಾತಿಯನ್ನು ಪಡೆಯುವುದು.
- ಕಾರ್ಯಕ್ರಮಕ್ಕೆ ಹಾಜರಾಗುವ ಸಂಪನ್ಮೂಲ ವ್ಯಕ್ತಿಗಳಿಗೆ ಇಲಾಖೆ ನಿಗದಿಪಡಿಸಿರುವ ಗೌರವ ಸಂಭಾವನೆಯನ್ನು ಮತ್ತು ನಿಯಮಾನುಸಾರ ಪ್ರಯಾಣಭತ್ಯೆ ಹಾಗೂ ದಿನಭತ್ಯೆಯನ್ನು ನಿಗದಿತ ಬಿಲ್ಲಿನಲ್ಲಿ ತಯಾರಿಸಿದ ನಂತರ ಆ ದಿನವೇ ಬಿಲ್ಲನ್ನು ವಿತರಿಸಿ ಬಟವಾಡೆ (Acquitance) ಪ್ರತಿಯನ್ನು ತಯಾರಿಸಿ ಕೊಳ್ಳುವುದು.
- ಜಿಲ್ಲಾ ಉಪನಿರ್ದೇಶಕರ ಕಛೇರಿ ಸಿಬ್ಬಂದಿ ಸಹಕಾರದಿಂದ ಕಾರ್ಯಕ್ರಮದ ಅಂತಿಮ ದಿನದ ಕೊನೆಯ ಅಧಿವೇಶನದಲ್ಲಿ ಶಿಬಿರಾರ್ಥಿಗಳ ಪ್ರಯಾಣಭತ್ಯೆ ಮತ್ತು ದಿನಭತ್ಯೆ ಬಿಲ್ಲನ್ನು ತಯಾರಿಸಿಕೊಳ್ಳುವುದು ಮತ್ತು ಹಾಜರಾತಿ ಪ್ರಮಾಣ ಪತ್ರ ನೀಡುವುದು. ಪ್ರತಿ ಶಿಬಿರಾರ್ಥಿಗಳಿಂದ ಪ್ರತ್ಯೇಕವಾಗಿ ಲಿಖಿತರೂಪದಲ್ಲಿ Feed back ಅನ್ನು ಪಡೆಯುವುದು.
- ಕಾರ್ಯಕ್ರಮ ಮುಗಿದ ನಂತರ ಸಂಯೋಜಕರುಗಳು ಸಂಭಾವನೆಗೆ ಸಂಬಂಧಿಸಿದಂತೆ ಬಿಲ್ಲನ್ನು ತಯಾರಿಸಿ ಜಿಲ್ಲಾ ಉಪನಿರ್ದೇಶಕರುಗಳಿಗೆ ಸಲ್ಲಿಸುವುದು ಮತ್ತು ಕಾರ್ಯಕ್ರಮದ ಬಗ್ಗೆ ಲಿಖಿತರೂಪದಲ್ಲಿ ಒಂದು ವರದಿಯನ್ನು ತಯಾರಿಸಿ ಜಿಲ್ಲಾ ಉಪ ನಿರ್ದೇಶಕರುಗಳ ಮೂಲಕ ಉಪನ್ಯಾಸಕರು/ಶಿಬಿರಾರ್ಥಿಗಳ ದಿನಚರಿಯೊಂದಿಗೆ ದಿನಾಂಕ: **20-08-2018ರೊಳಗೆ ಜಂಟಿ ನಿರ್ದೇಶಕರು (ಶೈಕ್ಷಣಿಕ) ಕೊಠಡಿ ಸಂಖ್ಯೆ-09, ಪದವಿ ಪೂರ್ವ ಶಿಕ್ಷಣ ಇಲಾಖೆ,18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'.** ಇವರಿಗೆ ತಪ್ಪದೆ ಕಳುಹಿಸುವುದು.
- ಈ ತರಬೇತಿ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ತರಬೇತಿ ನಡೆಯುವ ಕಾಲೇಜಿನ ಪ್ರಾಂಶುಪಾಲರು ಮತ್ತು ಈ ಸಮಿತಿಯ ಮೇಲಿರುತ್ತದೆ. ಸದರಿ ತರಬೇತಿ ಕಾರ್ಯಕ್ರಮವು 7 **ದಿನಗಳ** ತರಬೇತಿ ಕಾರ್ಯಕ್ರಮವಾಗಿರುತ್ತದೆ.
- ಪ್ರತಿ ದಿನ 90 ನಿಮಿಷಗಳ ನಾಲ್ಕು ಅಧಿವೇಶನಗಳನ್ನು ನಡೆಸುವುದು (ಈ ವಿಷಯಕ್ಕೆ ಒಟ್ಟು 4*7=28 ಅಧಿವೇಶನಗಳಾಗುತ್ತವೆ) ಪ್ರತಿ ಅಧಿವೇಶನದಲ್ಲಿ 45 ನಿಮಿಷಗಳ ಕಾಲ ಉಪನ್ಯಾಸ ಮತ್ತು ಉಳಿದ 45 ನಿಮಿಷಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುವುದು,

9-00 – 10-00- ಹಾಜರಾತಿ
**10.00 – 11.30 – ಮೊದಲನೇ ಅಧಿವೇಶನ**
11.30 – 11.45 – ಕಾಫಿ/ ಟೀ ವಿರಾಮ
**11.45 – 1.15 – ಎರಡನೇ ಅಧಿವೇಶನ**
1.15 – 2.00 – ಊಟದ ವಿರಾಮ
**2.00 – 3.30 – ಮೂರನೇ ಅಧಿವೇಶನ**
3.30 – 3.45 – ಕಾಫಿ/ ಟೀ ವಿರಾಮ
**3.45 – 5.15 – ನಾಲ್ಕನೇ ಅಧಿವೇಶನ.**

ಸದರಿ ತರಬೇತಿ ಕಾರ್ಯಕ್ರಮಕ್ಕೆ ಇಲಾಖೆಯು ಈ ಕೆಳಕಂಡ ಸಂಭಾವನೆ ಹಾಗೂ ಇತರೆ ವೆಚ್ಚಗಳನ್ನು ನಿಗದಿಪಡಿಸಿದ್ದು ಹಾಜರಾತಿ ಸಂಖ್ಯೆಗನುಗುಣವಾಗಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲಾಗುವುದು.

ತರಬೇತಿಗೆ ಹಾಜರಾಗುವ ಉಪನ್ಯಾಸಕರ ಸಂಖ್ಯೆಯನ್ನು ಲಭ್ಯ ಮಾಹಿತಿಯನ್ನು ಆಧರಿಸಿ ಅದರಂತೆ ಖರ್ಚುವೆಚ್ಚಗಳನ್ನು ಅಂದಾಜಿಸಿದೆ. ವಾಸ್ತವವಾಗಿ ಹಾಜರಾಗುವ ಉಪನ್ಯಾಸಕರ ಸಂಖ್ಯೆಗನುವಾಗಿ ಅಧರಿಸಿ ಇದು ವ್ಯತ್ಯಯವಾಗಬಹುದು.

**ತರಬೇತಿ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವ ಅನುದಾನಕ್ಕೆ ಖರ್ಚುವೆಚ್ಚದ ವಿವರ ಈ ಕೆಳಕಂಡಂತೆ ಇರುತ್ತದೆ.**

| ವಸತಿ ರಹಿತ (ಅರ್ಥಶಾಸ್ತ್ರ ವಿಷಯಗಳ ಉಪನ್ಯಾಸಕರುಗಳಿಗೆ )<br>ತರಬೇತಿ ದಿನಗಳು: 7 ದಿನಗಳು ಜಿಲ್ಲಾ/ಕ್ಲಸ್ಟರ್ ಮಟ್ಟದಲ್ಲಿ)<br>ಪ್ರತಿ ತರಗತಿಗೆ 50 ಉಪನ್ಯಾಸಕರುಗಳು ಭಾಗವಹಿಸುವ ಉಪನ್ಯಾಸಕರುಗಳ ಸಂಖ್ಯೆ:2155 | | | |
|---|---|---|---|
| 1. | ಸಂಪನ್ಮೂಲ ವ್ಯಕ್ತಿಗಳ ಗೌರವ ಸಂಭಾವನೆ ಒಬ್ಬರಿಗೆ ಒಂದು ಅವಧಿಗೆ Rs. 2000/-ರಂತೆ +ಟಿ.ಎ/ಡಿ.ಎ +ಸ್ಟೇಷನರಿ(ರೂ 100)ಗಳನ್ನು ಕೆ.ಸಿ.ಎಸ್.ಆರ್. ನಿಯಮಾನುಸಾರ ನೀಡಲು ತಗಲುವ ಅಂದಾಜು ವೆಚ್ಚ | 2100*43*4*7 | 25,28,400/- |
| 2. | Rs 500/-TA (one time) ಅರ್ಥಶಾಸ್ತ್ರದ 2155ಉಪನ್ಯಾಸಕರುಗಳಿಗೆ | 500*2155 | 10,77,500/- |
| 3. | ಸ್ಟೇಷನರಿ (ಫೈಲು, ಪೆನ್ನು, ಪ್ಯಾಡ್ ಸಂಬಂಧಿಸಿದ ಇತರೆ ವೆಚ್ಚಗಳಿಗಾಗಿ- ಇಲಾಖೆಯಿಂದ ಖರೀದಿಸಿ ಒದಗಿಸುವುದು) ವೆಚ್ಚಗಳಿಗಾಗಿ ತಲಾ ಒಬ್ಬರಿಗೆRs. 100 | 100*2155 | 2,15,500/- |
| 4. | ಶಿಬಿರಕ್ಕೆ ಹಾಜರಾಗುವ 2155ಶಿಬಿರಾರ್ಥಿಗಳು/ಉಪನ್ಯಾಸಕರಿಗೆ ಮಧ್ಯಾಹ್ನದ ಊಟ ಹಾಗೂ ಕಾಫಿ,ಟೀ ಸೇರಿದಂತೆ Rs 120/- ರಂತೆ | 120*7*2155 | **18,10,200/-** |
| 5. | Sound system, LCD projector, OHP, Screen PPT ವ್ಯವಸ್ಥೆ ಬಯೋಮೇಟ್ರಿಕ್‌ನಲ್ಲಿ ಉಪನ್ಯಾಸಕರ ಹಾಜರಾತಿಯನ್ನು ನಿರ್ವಹಿಸುವ ಕಛೇರಿ ಸಿಬ್ಬಂದಿಗೆ (ರೂ 1500/-), ಆಸನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಅಟೆಂಡರ್‌ಗಳಿಗೆ ಸಂಭಾವನೆ ಇತ್ಯಾದಿ ವೆಚ್ಚಗಳಿಗಾಗಿ- ಪ್ರತಿ ವಿಷಯದ ಒಂದು ಕೇಂದ್ರಕ್ಕೆ Rs. 13,000 | 13000*29 | 3,77,000/- |
| 6. | ಉಪನ್ಯಾಸಕರುಗಳು/ಸಂಯೋಜಕರಿಗೆ ದ್ವಿತೀಯ ಪಿಯುಸಿ ಅರ್ಥಶಾಸ್ತ್ರ ವಿಷಯದ ಪಠ್ಯಪುಸ್ತಕಗಳಿಗಾಗಿ ಒಂದು ಸೆಟ್ ಬೆಲೆ Rs130/- | **130*2155** | 2,80,150/- |
| 7. | ರಾಜ್ಯದ ಸಂಯೋಜಕರು ಸಂಭಾವನೆ ಒಬ್ಬರಿಗೆ Rs 7000 | **7000*1** | **7,000/-** |
| 8. | ರಾಜ್ಯದ ಸಹ ಸಂಯೋಜಕರು ಸಂಭಾವನೆ ಒಬ್ಬರಿಗೆ Rs 6000 | **6000*1** | 6,000/- |
| 9. | ಸಂಯೋಜಕರ ಸಂಭಾವನೆ ಒಬ್ಬರಿಗೆ (ಜಿಲ್ಲಾ ಮಟ್ಟ) Rs 5000 | 5000*29 | **1,45,000/-** |
| 10. | ಸಹ ಸಂಯೋಜಕರ ಸಂಭಾವನೆ ಒಬ್ಬರಿಗೆ(ಜಿಲ್ಲಾ ಮಟ್ಟ) Rs 4500 | 4500*29 | **130,500/-** |
| | ಒಟ್ಟು | | 65,77,250/- |

- ***ವಿಶೇಷ ಸೂಚನೆ:*** *ಸದರಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಉಪನ್ಯಾಸಕರಿಗೆ ಒಳ್ಳೆಯ ಊಟದ ಹಾಗೂ ಇತರೆ ಅವಶ್ಯಕ ವ್ಯವಸ್ಥೆಗಳನ್ನು ಮಾಡತಕ್ಕದ್ದು, ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ತರಬೇತಿ ಕಾರ್ಯಕ್ರಮವನ್ನು ಉತ್ತಮ ರೀತಿಯಲ್ಲಿ ನಡೆಸಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಿದೆ.*
- ತರಬೇತಿ ಕಾರ್ಯಕ್ರಮಕ್ಕಾಗಿ ನಿರ್ದೇಶನಾಲಯದಿಂದ ಬಿಡುಗಡೆ ಮಾಡುವ ಅನುದಾನವನ್ನು ಸಂಬಂಧಿಸಿದ ಉಪನಿರ್ದೇಶಕರ ರವರು ತರಬೇತಿ ನೀಡಿದ ಕಾಲೇಜು/ಸಂಸ್ಥೆಗೆ ನಿಯಮಾನುಸಾರ ಕೆ-2 ಮೂಲಕ ವಿತರಿಸುವುದು. ಸದರಿ ಮಾಹಿತಿಯನ್ನು ಈ ನಿರ್ದೇಶನಾಲಯಾದ ಜಂಟಿ ನಿರ್ದೇಶಕರು, ಶೈಕ್ಷಣಿಕ ಶಾಖೆ, ಕೊಠಡಿ ಸಂಖ್ಯೆ 09, ಪದವಿ ಪೂರ್ವ ಶೀಕ್ಷಣ ಇಲಾಖೆ, 18ನೇ ಅಡ್ಡ

ರಸ್ತೆ ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮರು ಟಪಾಲಿನಲ್ಲಿ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ ತಪ್ಪಿದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

- ಜಿಲ್ಲಾ ಉಪನಿರ್ದೇಶಕರು ತಮ್ಮ ವ್ಯಾಪ್ತಿಯ ತರಬೇತಿ ಕೇಂದ್ರಗಳಿಗೆ ತಮ್ಮ ಕಛೇರಿಯ ಸಿಬ್ಬಂದಿಯೊಂದಿಗೆ ಭೇಟಿ ನೀಡಿ ಹಾಜರಾತಿ ಹಾಗೂ ಖರ್ಚು-ವೆಚ್ಚಗಳ ಬಗ್ಗೆ ನಿಗಾವಹಿಸುವುದು. ಸಂಭಾವನೆ, ಪ್ರಯಾಣ ಭತ್ಯೆ/ದಿನಭತ್ಯೆ ಹಾಗೂ ಇತರೆ ವೆಚ್ಚಗಳನ್ನು ನಿಯಮಾನುಸಾರ ಬಳಸಿ, ಸರಿಯಾದ ವೇಳೆಯಲ್ಲಿ ಸಂಬಂಧಿಸಿದವರಿಗೆ ಮಂಜೂರು ಮಾಡಿರುವ ಮೊತ್ತವನ್ನು ಪಾವತಿಸಲು ಕ್ರಮವಹಿಸುವುದು. ತಪ್ಪಿದಲ್ಲಿ, ಮುಂದಿನ ಅಗುಹೋಗುಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಸರ್ಕಾರಕ್ಕೆ ಶಿಸ್ತುಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗುವುದು ಎಂಬ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ,ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ- ಮುಂದಿನ ಕ್ರಮಕ್ಕಾಗಿ.
3. ನಿರ್ದೇಶಕರ ಅಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, -ಮಾಹಿತಿಗಾಗಿ.
4. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, -ಮಾಹಿತಿಗಾಗಿ.
5. ಇ-ಅಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು -ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

ಅನುಬಂಧ-03

## Training for Government & Aided PU College Lecturers

Sub: Economics | No of Training Days: 07

State Co-ordinator Smt G B Nagarathnamma Principal, Govt PU College Srivara Tumkur: M No 9980352045

Co-ordinator Rajgopal R. Lect in Economics , Govt PU College Basavanagudi Bangalore 9343791757

| ಕ್ರಮ ಸಂಖ್ಯೆ | ಜಿಲ್ಲೆಗಳ ವಿವರ | ಸಂಯೋಜಕರ ವಿವರ | ಸಹ ಸಂಯೋಜಕರು ವಿವರ |
|---|---|---|---|
| 01 | ಬೆಂಗಳೂರು(ದ) | ವೀರರಾಜು.ಎಂ.ವಿ<br>ಉಪನ್ಯಾಸಕರು ಸ.ಪ.ಪೂ.ಕಾಲೇಜು,<br>ಅಗರ,ಎಚ್.ಎಸ್.ಆರ್<br>ಬೆಂಗಳೂರು(ದ) 9449324345<br>Tejuraj.v@gmail. com | ಯಶೋಧಮ್ಮ, ಉಪನ್ಯಾಸಕರು<br>ಸ.ಪ.ಪೂ.ಕಾಲೇಜು ಎಡೆಯೂರು,ಬೆಂ<br>9449765664 Yashodavgowda @ gmail.com |
| 02 | ಬೆಂಗಳೂರು(ಉ)<br>ಬೆಂಗಳೂರು(ಗ್ರಾ) | ಪುಷ್ಪಲತ<br>ಉಪನ್ಯಾಸಕರು ಸ.ಪ.ಪೂ.ಕಾಲೇಜು<br>13ನೇ ಅಡ್ಡರಸ್ತೆ ಮಲ್ಲೇಶ್ವರಂ | ಸುಂದರ ಹೆಚ್.ಟಿ. ಸರ್ಕಾರಿ ಪದವಿ<br>ಪೂರ್ವ ಕಾಲೇಜು, ಯಲಹಂಕ,<br>ಬೆಂಗಳೂರು |
| 03 | ಬಳ್ಳಾರಿ | ಯರ್ರಪ್ಪ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು ಸಿರಗುಪ್ಪ 9480727834 | ನಾಗೇಶ್ವರ .ಪಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು ಬಳ್ಳಾರಿ |
| 04 | ಬೀದರ್ | ಬಸವರಾಜಸ್ವಾಮಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಬೀದರ್ | ಚಂದ್ರಕಾಂತ್‌ಗಂಗಶೆಟ್ಟಿ.<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಹುಮನಾಬಾದ್ ಬೀದರ್ |
| 05 | ಬಾಗಲಕೋಟೆ | ಎ.ಡಿ.ಭಗವಾನ್<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು ಬೀದರ್ | ಡಿ.ವೈ.ಹರಿಜನ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು ರಾಂಪುರ |
| 06 | ಬೆಳಗಾವಿ | ಅಜಿತ್‌ಕುಮಾರ್,ಎಂ.<br>ಪ್ರಾಂಶುಪಾಲರು, ಶ್ರೀಮತಿ ನೇಮವ್ವ<br>ಕುಡಿಬೆ.ವೆ.ಸ.ಪ.ಪೂ. ಕಾಲೇಜು<br>ಘಜಗಾವ್ ಬೆಳಗಾವಿ SMTN KPUC @ gmail.com 9449466654 | ಕೆ.ಪಿ.ಶಿವರಾಯ<br>ಪ್ರಾಂಶುಪಾಲರು<br>ಆದರ್ಶವಿದ್ಯಾಮಂದಿರ<br>ಪ.ಪೂ.ಕಾಲೇಜು<br>ವಡಗಾವಿ ಬೆಳಗಾವಿ |
| 07 | ಚಿಕ್ಕಮಗಳೂರು | ಪೂರ್ಣೇಶ್<br>ಆಲ್ದೂರು<br>ಸ.ಪ.ಪೂ.ಕಾಲೇಜು<br>ಚಿಕ್ಕಮಗಳೂರು(ತಾ) | ಉಮಾಮಹೇಶ್ವರಪ್ಪ ಕೆ.ಡಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಮೈಲಿಮನೆ ಚಿಕ್ಕಮಗಳೂರು |
| 08 | ಚಿಕ್ಕಬಳ್ಳಾಪುರ | ಆದಿಶೇಷ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಗೌರಿಬಿದನೂರು 9535553225<br>Adishesha123@gMail.com | ಚಂದ್ರಕುಮಾರ್<br>ಪ್ರಾಂಶುಪಾಲರು<br>ವಿವೇಕಾನಂದ. ಪ.ಪೂ. ಕಾಲೇಜು.<br>ಮಳ್ಳೂರು |
| 9. | ಚಾಮರಾಜನಗರ<br>(NC) | ಅಲ್ಮಾಸ್‌ಬೇಗಂ<br>ಉಪನ್ಯಾಸಕರು ಸ.ಪ.ಪೂ.ಕಾಲೇಜು<br>ಚಾಮರಾಜನಗರ 9449680420 | ಮಹದೇವ್‌ನಾಯಕ್ ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಗುಂಡ್ಲುಪೇಟೆ |
| 10. | ಚಿತ್ರದುರ್ಗ | ಗುರುಮೂರ್ತಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು ಚಿತ್ರದುರ್ಗ | ಪ್ರಕಾಶ್ ಹೆಚ್.ಜಿ<br>ಉಪನ್ಯಾಸಕರು ಸ.ಪ.ಪೂ.ಕಾಲೇಜು<br>ಹೊಳಲ್ಕೆರೆ ಚಿತ್ರದುರ್ಗ |

| | | | |
|---|---|---|---|
| 11. | ದಾವಣಗೆರೆ | ನಾಗರಾಜಪ್ಪ.ಬಿ<br>ಉಪನ್ಯಾಸಕರು ಮೋತಿವೀರಪ್ಪ<br>ಸ.ಪ.ಪೂ.ಕಾಲೇಜು, 94483653600<br>B.Nagarajappa Moti@gmail.com | ಇಬ್ರಾಹಿಂ ಖಲೀಲುಲ್ಲಾ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಅಂಚಿಕೆರೆ ಹರಪನಹಳ್ಳಿ(ತಾ)<br>ದಾವಣಗೆರೆ |
| 12. | ದಾರವಾಡ . | ಹನುಮಂತಪ್ಪ<br>ಸ.ಪ.ಪೂ.ಕಾಲೇಜು<br>ಗೋಪನಕೊಪ್ಪಲು ಹುಬ್ಬಳ್ಳಿ | ಜಿ.ಬಿ.ತಾಹಶೀಲ್ದಾರ್<br>ಎಸ್.ಜೆ.ಆರ್.ಸಿ.ಮಾಲ್ವಿ<br>ಹುಬ್ಬಳ್ಳಿ(ತಾ) 9916560679 |
| 13. | ದಕ್ಷಿಣಕನ್ನಡ | ಡಾ:ಅಬ್ದುಲ್‌ರಜಾಕ್<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಕಾಟಿಪಾಳ್ಯ ಕೃಷ್ಣಾಪುರ ಮಂಗಳೂರು<br>8310682442 | ಡಾ: ಪ್ರದೀಪ್ ಎಂ<br>ಉಪನ್ಯಾಸಕರು<br>ಸೆಂಟ್‌ಅಲೋಸಿಸ್ ಪಿ.ಯು.ಕಾಲೇಜು<br>ಮಂಗಳೂರು 9448843308<br>Pradeep_manjunath<br>@yahoo.com |
| 14. | ಗದಗ್ | ವಿ.ಎಸ್.ದಲಾಲಿ<br>ಉಪನ್ಯಾಸಕರು<br>ಕೆ.ವಿ.ಎಸ್.ಪ.ಪೂ<br>ಗದಗ Vsd452017@gMAIL. Com | ಬಿ.ಎಸ್.ಮಲ್ಲಾಪುರ<br>ಸ.ಪ.ಪೂ.ಕಾಲೇಜು<br>ಹೊಂಬಳ<br>ಗದಗ(ತಾ) 9901901255 |
| 15. | ಹಾವೇರಿ | ಎಸ್.ಹೆಚ್.ಕಬ್ಬಿಣಕಂಕಿನ<br>ಎಸ್.ಎಮ್.ಎಸ್.ಪಿಯು.<br>ಕಾಲೇಜ್, ಹಾವೇರಿ 9448838105 | ಯತ್ತಿನಳ್ಳಿ, ಎಸ್.ಎಸ್<br>ಸ.ಪ.ಪೂ.ಕಾಲೇಜು |
| 16. | ಹಾಸನ | ರಮೇಶ<br>ಸ.ಪ.ಪೂ.ಕಾಲೇಜು<br>9448940030 | ವಸಂತಕುಮಾರ್<br>ಸ.ಪ.ಪೂ.ಕಾಲೇಜು<br>ಹಾಸನ |
| 17. | ಕೊಪ್ಪಳ | ಎಸ್.ಎಸ್.ಗೋಡಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು.ಕುಷ್ಟಗಿ | ರಾಜಶೇಖರ .ಪಾಟೀಲ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು.ಕೊಪ್ಪಳ |
| 18. | ಕಲಬುರಗಿ<br>ಯಾದಗಿರಿ | ತಿಪ್ಪಾರೆಡ್ಡಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು ಕಲಬುರಗಿ 9886160975<br>Tippareddy80@ gMail.com | ಜೀವನ್‌ರಾವ್‌ಕಂಪ್ಲಿ<br>ನೂತನವಿದ್ಯಾಲಯ<br>ಪ.ಪೂ.ಕಾಲೇಜು ಕಲಬುರಗಿ |
| 19. | ಕೋಲಾರ | ಶ್ರೀನಿವಾಸರೆಡ್ಡಿ<br>ಸ.ಪ.ಪೂ.ಕಾಲೇಜು ಮಾಲೂರು<br>9972748871 | ಚಂದ್ರಶೇಖರಾಚಾರಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು 9141450037 |
| 20. | ಮಂಡ್ಯ | ಭೈರೇಶ<br>ಉಪನ್ಯಾಸಕರು,<br>ಸ.ಪ.ಪೂ.ಕಾಲೇಜು<br>ಅರಕೆರೆ ಮಂಡ್ಯ, 9731793268 | ಎ.ಟಿ.ಕೆಂಪೇಗೌಡ<br>ಪೋಲಿಸ್‌ಕಾಲನಿ<br>ಉಪನ್ಯಾಸಕರು, ಸ.ಪ.ಪೂ.ಕಾಲೇಜು,<br>ಪೋಲಿಸ್‌ಕಾಲನಿ, ಮಂಡ್ಯ |
| 21. | ಮೈಸೂರು<br>ಕೊಡಗು | ಶಿವೇಗೌಡ,ಈ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು, ಮೈಸೂರು<br>9964374501,<br>eshiegowda@gmail.com | ಜನಾರ್ಧನ.ಪಿ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಹನಗೋಡು<br>ಮೈಸೂರು |
| 22. | ರಾಮನಗರ | ಬೆಟ್ಟಸ್ವಾಮಿ<br>ಉಪನ್ಯಾಸಕರು,ಸ.ಪ.ಪೂ.ಕಾಲೇಜು<br>ಮಾಗಡಿ, 9482227188 | ಶಿವಣ್ಣ<br>ಉಪನ್ಯಾಸಕರು,ಬಾಲಕಿಯರ.ಬಿ.ಎಸ್.ವಿ.ಪಿ<br>ಪ.ಪೂ.ಕಾಲೇಜು,ರಾಮನಗರ<br>9242604418<br>gShivannakothiphra@gMail.com |

| | | | |
|---|---|---|---|
| 23. | ರಾಯಚೂರು | ಬೂದೆಪ್ಪ,<br>ಉಪನ್ಯಾಸಕರು, ಬಾಲಕರ,ಸ,ಪ.ಪೂ.ಕಾಲೇಜು<br>ರಾಯಚೂರು, 9448222437 | ಚಂದ್ರಶೇಖರ್<br>ಉಪನ್ಯಾಸಕರು<br>ಬಾಲಕೀಯರ,ಸ.ಪ.ಪೂ.<br>ಕಾಲೇಜು. ರಾಯಚೂರು,7892759773 |
| 24. | ಶಿವಮೊಗ್ಗ | ಷಣ್ಮುಖಿ ಎಸ್<br>ಸ.ಬಾಲಕೀಯರ, ಪ.ಪೂ.ಕಾಲೇಜು<br>ನ್ಯೂಟೌನ್‌ಭದ್ರಾವತಿ<br>9611403774 | ಪ್ರಕಾಶ್,ಹೆಚ್.ಎಮ್<br>ಉಪನ್ಯಾಸಕರು<br>ಸಂಚಿಹೊನ್ನಮ್ಮ ಪ.ಪೂ.<br>ಕಾಲೇಜು,ಭದ್ರಾವತಿ<br>94493716117 |
| 25. | ತುಮಕೂರು | ರಾಜಣ್ಣ, ಎಸ್<br>ಪ್ರಾಚಾರ್ಯರು,ಬಸವೇಶ್ವರ,ಪ.ಪೂ.ಕಾಲೇಜು<br>ಕೋಳಾಲ,ಕೊರಟಗೆರೆ(ತಾ)<br>ತುಮಕೂರು(ಜಿಲ್ಲೆ),9448899299 | ಶಂಕರ್<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು,ಕೊರಟಗೆರೆ |
| 26. | ಉತ್ತರಕನ್ನಡ<br>(ಕಾರವಾರ) | ಸುಭಾಷ್ ಆರ್,ನಾಯಕ್<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>ಯಲ್ಲಾಪುರ,ಕಾರವರ<br>9449192170 | ಶ್ರೀ ರಾಮಲಿಂಗೇಶ್ವರ<br>ಸ.ಪ.ಪೂ.ಕಾಲೇಜು<br>ಕಿರುವತ್ತಿ,ಯಲ್ಲಾಪುರ<br>ಕಾರವಾರ |
| 27. | ಉಡುಪಿ | ಕಿಶೋರ್‌ಕುಮಾರ್<br>ಉಪನ್ಯಾಸಕರು<br>ಉದ್ಯಾವರ,ಉಡುಪಿ<br>9743492539 | ಲಿಂಗಯ್ಯ<br>ಉಪನ್ಯಾಸಕರು<br>ಸ.ಪ.ಪೂ.ಕಾಲೇಜು<br>9480266831 |
| 28. | ವಿಜಯಪುರ | ಬಿರಾದಾರ್, ಐ.ಬಿ<br>ಪ್ರಾಚಾರ್ಯರು<br>ಆರ್.ಡಿ.ಪಾಟೀಲ್,ಪ.ಪೂ.ಕಾಲೇಜು<br>ಸಿಂಧಗಿ, ವಿಜಯಪುರ | ಕನ್ನೂರು<br>ಉಪನ್ಯಾಸಕರು<br>ಸ.ಪ.ಪೂ,ಕಾಲೇಜು<br>ಬರಡೋಲ,9611902915 |
| 29. | ಚಿಕ್ಕೋಡಿ | ಬಿ.ಎಸ್.ಬಿರಾದಾರ್<br>ಆರ್.ವಿ.ಪ.ಪೂ,ಕಾಲೇಜು<br>ರಾಯಬಾಗ 9845889947 | ಚೌಗಲೆ.ಎನ್.ಎಸ್<br>ಆರ್,ಡಿ.ಪಿ.ಯು.ಕಾಲೇಜು<br>ಚಿಕ್ಕೋಡಿ 9482367397 |

14/8/18

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಅನುಬಂಧ-02

| Sl No | Training for Government & Aided PU College Economics Lecturers State | | | | |
|---|---|---|---|---|---|
| | Name of the Dist (Code) | GOVT | AIDED | total | Name of training Center (Non Residential) |
| 1 | Bangalore North (AN) + Bangalore Rural (BB) | 24+23 | **30+10** | 54+33 | S J R C PU College, Anand Rao Circle, Bangalore North |
| 2 | Bangalore South (AS) | 29 | **33** | 62 | SBMJ Ind PU College, J C Road, Bangalore |
| 3 | Ramnagar (BR) | 42 | **12** | 54 | Gowramma memorial PU College (MH College), Ramnagar |
| 4 | Bellary (CC) | 44 | **13** | 57 | Nandi PU College, Bellary (T & Dist),B Belagari |
| 5 | Belgaum (DD) | 38 | **22** | 60 | Marata mandal PU College, Court Compound Belgaum |
| 6 | Bagalkot (EB) | 35 | **30** | 65 | S B Patil PU College, Navanagar , Bagalkote |
| 7 | Vijipur (EE) | 20 | **40** | 60 | PDJ PU College, Bagalkot Rd, Vijipur |
| 8 | Bidar(FF) | 18 | **29** | 47 | BV Bomareddy PU College, Bidar |
| 9 | Davangere(GD) | 66 | **33** | 99 | Maglur Basappa PU College , Davangere |
| 10 | Chitradurga (GG) | 56 | **43** | 99 | Donbosco PU College, NH-4 Chitradurga |
| 11 | Chikmaglur (HH) | 46 | **15** | 61 | Govt PU College for Girls, Basavanahalli, Chikmaglur |
| 12 | Gadag (JG) | 26 | **22** | 48 | Thondadasiddeshwara PU College, Gadag |
| 13 | Haveri (JH) | 33 | **38** | 71 | F J M PU College, Haveri |
| 14 | Dharwad (JJ) | 27 | **32** | 59 | Govt PU College, Gopanna kuppa Hubbali |
| 15 | Gulbarga (KK), Yadgiri(KY) | 49+21 | **18+3** | 67+24 | Rashmi PU College, Honasur Rd, Gulbarga |
| 16 | Hassan (LL) | 104 | **23** | 127 | Govt PU College for Girls, Gandadha kote campus, R C Road, Hassan |

| | | | | | |
|---|---|---|---|---|---|
| 17 | Chikkaballapur ( MC) | 34 | **8** | 42 | Best PU College tq, Chikkaballapur |
| 18 | Kolar (MM) | 40 | **10** | 50 | Govt PU College for Boys, Kolar |
| 19 | Chamarajnagar (NC) | 33 | **5** | 38 | St Francis PU College C R Nagar |
| 20 | Mysore (NN), Kodagu (VV) | 87+17 | **25-10** | 112+27 | Ontekoppal Govt PU College, Mysore |
| 21 | Mandya (PP) | 84 | **16** | 100 | P E S PU College, Eng coll Rd Mandya |
| 22 | Karvar (QQ) | 39 | **20** | 59 | Govt PU College, Nellikeri Kumta, Karvar |
| 23 | Koppal (RK) | 31 | **8** | 39 | Govt Girls PU College, Koppala |
| 24 | Raichur (RR) | 31 | **6** | 37 | Taggore PU College, opp Stadium Raichur |
| 25 | Mangalore (SS) | 54 | **36** | 90 | St Alyosius PU College, Mangalore |
| 26 | Udupi (SU) | 47 | **12** | 59 | M G M PU College, Udupi |
| 27 | Shimoga (TT) | 70 | **17** | 87 | National Junior PU College, Shimoga |
| 28 | Tumkur (UU) | 95 | **99** | 194 | Sarvodaya PU College, Tumkur |
| 29 | Chikodi | 15 | **36** | 51 | Place will be informed later |
| | TOTAL | 1378 | **764** | 2142 | |

18/7/14

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

Annexure-01

**DEPARTMENT OF PRE UNIVERSITY EDUCATION BENGALURU 2018-19**

**TRAINING PROGRAMME JULY - 2018 SUBJECT : ECONOMICS CODE: 22**

| DATE | I SESSION 10-00-11-30 | | II SESSION 11-45-1-15 | | III SESSION 2-00-3-30 | | IV SESSION 3-45-5-15 |
|---|---|---|---|---|---|---|---|
| 30-07-2018 | REGISTRATION AND INAGURATION | TEA BREAK | CHAPTER 1-MICRO<br>CHAPTER 1- MACRO INTRODUCTION | LUNCH BREAK | CHAPTER 2 - MICRO THEORY OF CONSUMER BEHAVIOUR | TEA BREAK | CHAPTER 2 - MICRO THEORY OF CONSUMER BEHAVIOUR |
| 31-07-2018 | CHAPTER 2 - MICRO THEORY OF CONSUMER BEHAVIOUR | | PERSONALITY DEVELOPMENT PROGRAMME | | CHAPTER 3 - MICRO PRODUCTION AND COSTS | | CHAPTER 3 - MICRO PRODUCTION AND COSTS |
| 01-08-2018 | CHAPTER 4 - MICRO THE THEROY OF THE FIRM UNDER PERFECT COMPETITION | | CHAPTER 4 - MICRO THE THEROY OF THE FIRM UNDER PERFECT COMPETITION | | CHAPTER 5- MICRO MARKET EQUILIBRIUM | | CHAPTER 5- MICRO MARKET EQUILIBRIUM |
| 02-08-2018 | CHAPTER 6-MICRO NON-COMPETITIVE MARKETS | | CHAPTER 6-MICRO NON-COMPETITIVE MARKETS | | CHAPTER 2 - MACRO NATIONAL INCOME ACCOUNTING | | CHAPTER 2 - MACRO NATIONAL INCOME ACCOUNTING |
| 03-08-2018 | CHAPTER 2 - MACRO NATIONAL INCOME ACCOUNTING | | BLUE PRINT PREPARATION | | CHAPTER 3 - MACRO MONEY AND BANKING | | CHAPTER 4 - MACRO DETERMINATION OF INCOME AND EMPLOYMENT |
| 04-08-2018 | CHAPTER 4 - MACRO DETERMINATION OF INCOME AND EMPLOYMENT | | CHAPTER 5 - MACRO GOVERNMENT: BUDGET AND THE ECONOMY | | CHAPTER 5 - MACRO GOVERNMENT: BUDGET AND THE ECONOMY | | CHAPTER 6 - MACRO OPEN ECONOMY MACROECONOMICS |
| 05-08-2018 | CHAPTER 6 - MACRO OPEN ECONOMY MACROECONOMICS | | QUESTION PAPER PREPARATION | | QUESTION PAPER PREPARATION | | QUESTION PAPER PREPARATION |